

ಮೊನ್ನೆ ನಡೆದ ದ್ಯೂತ ಪ್ರಸಂಗದ ಸೋಲಿನ ಅನಂತರ ತಾನು ಯಾವುದಕ್ಕೂ ಪ್ರತಿಕ್ರಿಯಿಸದಂತೆ, ಪ್ರತಿ ಮಾತನಾಡದಂತೆ, ಕೃಷ್ಣ–ವಿಧುರರು ಕಟ್ಟಪ್ಪಣೆ ಮಾಡಿರುವುದು ನೆನಪಿಸಿಕೊಂಡು ವಿಷಾದಿಸುತ್ತಾ, ದ್ರೌಪದಿಯ ಮಾತುಗಳನ್ನು ಮರೆಯಲೆತ್ನಿಸಿ ಕುಂತಿ ಸುಖಾಸೀನದಿಂದ ಮೇಲೆದ್ದು ಉದ್ಯಾನವನದ ಕಡೆಗೆ ತೆರೆದಂತಿದ್ದ ವಿಶಾಲ ಕಿಟಕಿಯ ಬಳಿಗೆ ನಡೆದಳು.

ವೃದ್ಧಮುಖದ ಮೇಲೆ ಚಿಂತೆಯ ಮತ್ತೊಂದು ಗೆರೆ.

‘ನನ್ನ ಅಂತಃಪುರಕ್ಕೆ ದ್ರೌಪದಿ ಬಂದು ಆಗಲೇ ಅರ್ಧ ತಾಸಿಗೂ ಮೇಲಾಯಿತು. ಏನಾದರೂ ಫಲಾಹಾರ, ಬಾಯಾರಿಕೆಗೆ ಪಾನೀಯ ತರಲು ದಾಸಿಯರಿಗೆ ಹೇಳಿ ಕಳಿಸಲೆ? ಈಗ ಅವುಗಳನ್ನು ಸೇವಿಸುವ ಮನಸ್ಥಿತಿಯಲ್ಲಿ ಇದ್ದಾಳೆಯೇ? ಬಂದಾಗಿನಿಂದ ಒಂದೇ ಸಮನೆ ಮಾತನಾಡುತ್ತಿದ್ದಾಳೆ. ನಾನು ಮಾತ್ರ ಏನೆಂದು ಮಾತನಾಡಲಿ? ರಾಜ್ಯ ಸಂಪತ್ತನ್ನು ದ್ಯೂತದಲ್ಲಿ ನನ್ನ ಮಕ್ಕಳು ಸೋತು ಬಂದಿರುವುದಕ್ಕೆ ಸಂತೈಸಲೇ? ಬರೀ ಗಂಡಸರೇ ಇದ್ದ ಸಭೆಯಲ್ಲಿ ಅವಮಾನಿತಳಾಗಿ ಬಂದುದಕೆ ಸಾಂತ್ವನ ಹೇಳಲೆ?’

ತಾನೇ ಹೋಗಿ ಬೆಂಕಿ ಮೇಲೆ ಬಿದ್ದು ರೆಕ್ಕೆ ಸುಟ್ಟುಕೊಂಡ ಚಿಟ್ಟೆಯಂತೆ ಚಡಪಡಿಕೆ.

ದ್ರೌಪದಿಯ ಮಾತು ಮುಂದುವರಿಯಿತು. ‘ಐವರನ್ನು ವರಿಸುವುದು ಸುಲಭವಾದಂತೆ, ಐವರೊಡನೆ ಬಾಳುವೆ ಮಾಡುವುದು ನನಗೆ ಸುಲಭವಾಗಿರಲಿಲ್ಲ. ಪ್ರತಿ ರಾತ್ರಿಯೂ ಒಬ್ಬನ ಜೊತೆ ಇದ್ದು ಬಂದುದಕೆ ಮತ್ತೊಬ್ಬನಿಗೆ ಮುನಿಸು, ಇಲ್ಲದ ಅಸಮಾಧಾನ. ಅಬ್ಬಾ! ನನಗೆ ಸಾಕ್ಷಾತ್ ನರಕ ದರ್ಶನವಾಗುತ್ತಿತ್ತು. ಒಮ್ಮೊಮ್ಮೆ ಒಬ್ಬರಿಗಿಂತ ಒಬ್ಬರಿಗೆ ತಾನೇನು ಕಡಿಮೆಯಿಲ್ಲ ಎಂದು ತೋರಿಸಿ ವಿಜೃಂಭಿಸುವ ತವಕವಾದರೆ, ಮತ್ತೊಮ್ಮೆ ಅವರಿವರ ಬಳಿ ಹೋಗಿ ಬಂದಿರುವ ನೀನೆಷ್ಟರವಳೆಂಬ ತಿರಸ್ಕಾರ. ಸಾಕಾಗಿತ್ತು ನನಗೆ. ಕಡೆಗೆ ಅವರನ್ನೆಲ್ಲಾ ಒಪ್ಪಿಸಿ ವರ್ಷಕ್ಕೊಬ್ಬನ ಜೊತೆ ಕೂಡಿರುವ ಒಪ್ಪಂದ ತಂದುದಾಯ್ತು. ಅದರಿಂದ ಅರ್ಜುನನ ಅಭಿಮಾನಕ್ಕೆ ಭಂಗವಾಯ್ತಲ್ಲವೇ! ಅವನು ಗೆದ್ದು ತಂದ ಹೆಣ್ಣಲ್ಲವೇ ನಾನು? ವರ್ಷಗಟ್ಟಲೆ ನನಗಾಗಿ ಕಾಯಲು ಅವನೇನು ಹಾಲುಗಲ್ಲದ ಹಸುಳೆಯೇ! ಅಥವಾ ನಪುಂಸಕನೇ? ನೀವು ಮಾಡಿದ ತಪ್ಪಿಗೆ ನಾನು ಶಿಕ್ಷೆ ಅನುಭವಿಸಬೇಕಾಯ್ತು ನೋಡಿ... ಸುಭದ್ರೆಯನ್ನು ವರಿಸಿ ಇಲ್ಲಿಗೇ ಕರೆತಂದನಲ್ಲಾ! ನನ್ನ ಕಣ್ಣ ಮುಂದೆಯೇ ಅವರಿಬ್ಬರ ಓಡಾಟ, ಸಲ್ಲಾಪ ಪ್ರಮೋದಾವಳಿ... ನನ್ನನ್ನು ಇನ್ನಿಲ್ಲದಂತೆ ಇರಿಯುತ್ತಿತ್ತು. ಅತ್ತೆ... ಸುಕೋಮಲೆಯಾದ ನನ್ನೊಡನಿರುವಾಗ ಹಿಡಿಂಬೆಯ ಒರಟು ಸಾಂಗತ್ಯವನ್ನು ಭೀಮ ಆಗಾಗ್ಗೆ ನೆನೆಯುತ್ತಿದ್ದದ್ದು ನನಗೆ ಅರಿವಾಗುತ್ತಿರಲಿಲ್ಲ ಎಂದುಕೊಳ್ಳಬೇಡಿ. ಇನ್ನು ಧರ್ಮರಾಯ, ಲೋಕದ ಎದುರು ದ್ಯೂತದಲಿ ಈಗ ನನ್ನನ್ನು ಸೋತಿರಬಹುದು, ಆದರೆ ಮದುವೆಯಾದ ಹೊಸತರಿಂದಲೂ ತಮ್ಮನ ಗೆಲುವಿಗೆ ದಕ್ಕಿದವಳೆಂದು ಆತನಿಗೇ ಮೀಸಲೆಂದು ನನ್ನಲ್ಲಿಯೂ ಧರ್ಮಪಾಲನೆ ಮಾಡುತ್ತಲೇ ಬಂದ. ಕಾಡಲೂ ಇಲ್ಲ, ಕೂಡಲೂ ಬರಲಿಲ್ಲ. ಬಾಳಿನ ಜೂಜಾಟದ ಈ ಕಲಿ ನನ್ನ ಬಾಳಿನ ಜೂಜಾಟದಲಿ ಯಾವಾಗಲೋ ಸೋತುಬಿಟ್ಟಿದ್ದ. ಇನ್ನು ನಕುಲ ಸಹದೇವರು ಎಳೆಯರು, ಅತ್ತೆ... ಅವು ಎಳೆಯ ಕೂಸುಗಳು. ಮೂವರು ಲೋಕೋತ್ತರ ವೀರ ಅಣ್ಣಂದಿರ ಅಂತರಂಗದ, ಅಂತಃಪುರದ ಅರಸಿಯನ್ನು ತಮ್ಮ ಆಂತರ್ಯಕ್ಕೆ ಬರಗೊಡುವರೇ? ಪಾಪ, ಅನುಮಾನ ಅಸಮಾಧಾನಗಳಿಂದಲೇ ನನ್ನ ಹತ್ತಿರ ಬರುತ್ತಿದ್ದರು, ಹೌದು ಅತ್ತೆ. ಅಕ್ಷರಶಃ ಇಂತಹವರೊಡನೆ ನಾನು ಇನ್ನಿಲ್ಲದಂತೆ ಬರಗೆಟ್ಟು ಬಾಳಿದೆ. ಜನಕೆ ಆಡಿಕೊಳ್ಳಲೇನು ಕಡಿಮೆ? ನನಗೆ ಯೌವನಿಗರೂ, ಧೀರ ಪರಾಕ್ರಮಿಗಳೂ ಆದ ಗಂಡರೈವರು! ಈಕೆಗೆ ಮತ್ತೇನು ಕೊರತೆ? ಎಂದು ಕರುಬಿರುತ್ತಾರೆ’ ದೀರ್ಘ ನಿಟ್ಟುಸಿರಿಟ್ಟಳು ದ್ರೌಪದಿ.

ಇನ್ನೇನೇನು ಮಾತನಾಡಬಹುದೆಂದು ನೆನೆದು ಕುಂತಿ ಬೆಚ್ಚಿದಳು.

‘ಸಾಕು ತಾಯೀ ನಿಲ್ಲಿಸು, ಎಂದುಬಿಡಲೇ? ನಿಲ್ಲಿಸೆಂದರೆ ನಿಲ್ಲಿಸಿಯಾಳೇ? ಇಷ್ಟೆಲ್ಲಾ ಆದಮೇಲೆಯೂ ಇನ್ನುಮುಂದೆಯೂ ನನ್ನ ಮಾತನ್ನು ಕೇಳಿಯಾಳೇ?’ ಕಂಗಾಲಾದಳು ಕುಂತಿ.

‘ತುಂಬು ಸಭೆಯಲಿ ನಗ್ನಳಾದಾಗ, ಪತ್ನಿಯ ಮಾನರಕ್ಷಣೆ ಮಾಡಲಾರದಕ್ಕೆ ಜಗತ್ತು ನಿಮ್ಮ ಮಕ್ಕಳನ್ನು ಕುರಿತು ಆಡಿಕೊಂಡು ನಕ್ಕಿರುತ್ತದೆ. ಈ ಐವರೂ ದ್ರೌಪದಿಯ ಸಂಕಟಕ್ಕಾಗುವವರಲ್ಲ ಎಂಬುದು ಇನ್ನಾದರೂ ಜಗಜ್ಜಾಹೀರಾಗಿರುತ್ತೆ ಅಲ್ಲವೇ ಅತ್ತೆ? ನನ್ನ ಮರ್ಯಾದೆ ಹೋಗುತ್ತಿದ್ದಾಗ ಇವರೇನು ತಮ್ಮ ಪೌರುಷವನ್ನೂ ಕೌರವನಿಗೆ ಮಾರಿಕೊಂಡಿದ್ದರೇ? ಹಾಗೆ ಬತ್ತಲು ನಿಂತವಳ ಮಾನ ಕಾಯ್ದವನಾದರೂ ಯಾರು? ತನ್ನ ತಂಗಿಯನ್ನು ನನ್ನ ಗಂಡನಿಗೆ ಮೋಸದಿಂದ ಮದುವೆ ಮಾಡಿಸಿಕೊಟ್ಟವನು! ತನ್ನ ತಪ್ಪಿನ ಪ್ರಾಯಶ್ಚಿತ್ತಕ್ಕಾಗಿ ಈ ಸಮಯವನ್ನು ಸರಿಯಾಗಿ ಬಳಸಿಕೊಂಡನು. ಭಲಾ ಚತುರ..!’

ತಿರಸ್ಕಾರದಿಂದ ಆಡಿದ ದ್ರೌಪದಿಯ ವ್ಯಂಗ್ಯದ ಮಾತುಗಳು ಕುಂತಿಯನ್ನು ಮತ್ತೂ ಗಾಸಿಗೊಳಿಸಿದವು.

‘ಕೃಷ್ಣ.., ಕೃಷ್ಣಾ..! ನಾಲಗೆಯು ಖಡ್ಗಕ್ಕಿಂತಲೂ ಮೊನಚಾದ ಆಯುಧವೆಂದು ಕೇಳಿದ್ದೆ. ಆದರೆ ಇಷ್ಟು ಹರಿತವೆಂದು ಈಗಲೇ ತಿಳಿದದ್ದು. ನನ್ನ ಸೊಸೆ ಬಲುವಾಗಿ ನೊಂದು ಆಡುತ್ತಿರುವ ಈ ಅಪದ್ಧ ಮಾತುಗಳನ್ನು ಕ್ಷಮಿಸಿಬಿಡು ಪರಮಾತ್ಮ.’

ಕೃಷ್ಣನನ್ನು ಸ್ಮರಿಸುತ್ತಿರುವಾಗ, ಹತ್ತಿರ ಬಂದ ದ್ರೌಪದಿ ‘ನಿಮ್ಮ ಜೀವಮಾನವಿಡೀ ನೀವೂ ಸಹ ನಾಲ್ಕು ಮಂದಿ ಪುರುಷರನ್ನು ಸಂಧಿಸಿದ್ದೀರಲ್ಲವೇ? ಹೇಳಿ ಅತ್ತೆ, ಅವರು ನಿಮ್ಮನ್ನು ಅರ್ಥ ಮಾಡಿಕೊಂಡರೇ? ನೀವು ನಿಮ್ಮಿಚ್ಛೆಯಂತೆ ಸಮಯ ಸಾಧಿಸಿಕೊಂಡಿರಿ ಎಂದು ಲೋಕ ನುಡಿದಿರಬಹುದು. ನಿಮ್ಮಂತಹ ಅಸಹಾಯಕ ಹೆಣ್ಣನ್ನು ವಂಶೋದ್ಧಾರದ ಹೆಸರಿನಲ್ಲಿ ಬಳಸಿಕೊಂಡದ್ದು ಯಾರ ತಪ್ಪು? ಸಮಾಜದ್ದೆ? ಕಟ್ಟುಪಾಡಿನದ್ದೆ? ಪಾಂಡು ಮಹಾರಾಜರ ದೌರ್ಬಲ್ಯದ್ದೇ? ಹೇಳಿ ಅತ್ತೆ. ಇಲ್ಲಿ ತಪ್ಪು ಯಾರದ್ದೆಂದು. ಅದು ಹೋಗಲಿ, ಹೀಗೆ ಸಂಧಿಸಿದ ಆ ನಾಲ್ವರಿಂದ ನಿಮ್ಮ ಬಯಕೆ ತೀರಿತೆ? ಹೇಗೆ ತೀರೀತು ಹೇಳಿ! ವ್ರತದಂತೆ ಬಂದು ವೀರ್ಯದಾನ ಮಾಡಿ ಹೋದವರಿಂದ ಒಲವನ್ನು ನಿರೀಕ್ಷಿಸುವುದು, ಬಯಸುವುದು ಹೆಂಗಸರಾದ ನಮ್ಮ ಮುಠ್ಠಾಳತನ. ಈಗ ನನ್ನನ್ನೇ ನೋಡಿ, ನಾನು ನನ್ನ ಜೀವಮಾನವಿಡೀ ಜಗದೇಕ ವೀರರಾದ ಐವರನ್ನು ಕೂಡಿರುವೆ. ಆದರೂ ನನ್ನ ಬಯಕೆ ತೀರಿಲ್ಲ. ನೀವೂ ನನ್ನಂತೆಯೇ ಹೆಣ್ಣಲ್ಲವೇ? ನಿಮಗೆ ಚೆನ್ನಾಗಿ ಗೊತ್ತಾಗುತ್ತದೆ ಎಂದೇ ಈ ಮಾತು ಹೇಳುತ್ತಿರುವೆ ಅತ್ತೆ. ಮತ್ತೊಂದು ತಮಾಷೆ ಎಂದರೆ, ನಾನು ನಿಮ್ಮ ಜೇಷ್ಠ ಪುತ್ರ ಕರ್ಣನನ್ನೂ ಅದೆಷ್ಟೋ ಬಾರಿ ಮನಸ್ಸಲ್ಲೇ ಬಯಸಿದ್ದೆ. ನಿಮ್ಮ ಆರೂ ಮಕ್ಕಳೂ ನನ್ನವರೇ ಎಂಬ ಭಾವನೆ ನನ್ನಲ್ಲಿದೆ. ಆದರೆ ಜೊತೆಗಿರುವವರಲ್ಲಿ ಮಾತ್ರ ನಾನು ಅವರವಳೆಂಬ ಭಾವಕ್ಕೆ ಅಭಾವವಿದೆ...’

ದ್ರೌಪದಿ, ಕುಂತಿಯ ಬಳಿ ಬಂದಳು.

ಆಕೆಯ ಮೈ ನಡುಗುತ್ತಿತ್ತು, ತುಟಿಗಳು ಅದುರುತ್ತಿದ್ದವು, ಕಂಗಳು ತುಂಬಿದ್ದವು, ಕೊರಳುಬ್ಬಿ ಬಂದ ಮಾತುಗಳು ಕಠೋರವಾಗಿದ್ದವು.

‘ಇಷ್ಟು ವರ್ಷಕಾಲ ತೀರಲಾರದ ಬಯಕೆಯ ಅಗ್ನಿಕುಂಡದಲಿ ಬೇಯುತ್ತಾ ನರಳುತ್ತಿರುವ ನಾನು, ಪುನಃ ಲೋಕದೆದುರು ಇನ್ನಿಲ್ಲದಂತೆ ಅಪಮಾನಿತಳಾಗಿ ಬಂದಿರುವೆ. ಈ ದ್ರೌಪದಿ ಅಪಮಾನಿತಳಾಗಿ ಸುಮ್ಮನಿರುವವಳಲ್ಲ. ನನ್ನನ್ನು ಅಪಮಾನಿಸಿದ ಆ ಜಾಗದಲ್ಲಿ ನಿಂತೇ ಕುರುವಂಶ ನಿರ್ವಂಶದ ಪ್ರತಿಜ್ಞೆಗೆ ಕಾರಣಳಾಗಿರುವೆ. ಅದು ಕಾರ್ಯಗತವಾಗುವುದೂ ನಿಮ್ಮ ಮಕ್ಕಳಿಂದಲೇ ಅತ್ತೆ. ಯುದ್ಧವಾದರೆ, ನಿಮ್ಮ ಮೊದಲ ಮಗ ಕರ್ಣನೂ ಸಹ ನಿಮ್ಮುಳಿದ ಐದೂ ಮಕ್ಕಳ ಪ್ರತಿಸ್ಪರ್ಧಿ ಎಂಬುದು ನೆನಪಿರಲಿ. ಇಷ್ಟು ಮಾತ್ರ ಹೇಳಲು ಇಲ್ಲಿಗೆ ಬಂದಳೇ ಇವಳು ಎಂದುಕೊಳ್ಳದಿರಿ. ಹೇಳಲಾರದ ಮಾತುಗಳು ಒಡಲ ಕುಲುಮೆಯೊಳಗೆ ಕುದಿಯುತ್ತಿವೆ. ಅಗ್ನಿಪುತ್ರಿ ನಾನು, ಅದರೊಳಗೇ ನನ್ನನ್ನೂ ದಹಿಸಿಕೊಳುತ್ತಿರುವೆ. ಅತ್ತೆ, ದ್ಯೂತದ ಕಟ್ಟಳೆ ಯಂತೆ ನಾಳೆಯೇ ನಾವು ವನವಾಸ, ಜೊತೆಗೆ ಅಜ್ಞಾತವಾಸಕ್ಕೆ ಹೊರಡುವವರಿದ್ದೇವೆ. ನೀವು ವಯಸ್ಸಾದವರು ನಮ್ಮೊಡನೆ ಬಂದು ನರಳುವುದು ಬೇಡವೆಂದು ನಿಮ್ಮ ಮಕ್ಕಳಲ್ಲಿ ಒಪ್ಪಿಸಿದ್ದೇನೆ. ನನ್ನ ಪ್ರತಿಜ್ಞೆಯನ್ನು ನಿಮ್ಮ ಹಿರಿಯ ಮಗ ಕರ್ಣನ ಸಲುವಾಗಿ ನೀವೆಲ್ಲಿ ನೆರವೇರಿಸಲು ಬಿಡುವುದಿಲ್ಲವೇನೋ ಎಂಬ ಶಂಕೆಯಿಂದ ಯುದ್ಧ ಪ್ರಾರಂಭ ಆಗುವವರೆಗೂ ನಿಮ್ಮನ್ನು ನಿಮ್ಮ ಮಕ್ಕಳಿಂದ ದೂರವಿರಿಸಬೇಕೆಂದು ನನ್ನ ಇಚ್ಛೆಯಾಗಿದೆ. ಮುಂದಾಗುವ ಯುದ್ಧ ನಿಲ್ಲಿಸಬಲ್ಲಿರಾ ನೋಡಿ ಎಂದು ನಿಮಗೆ ಈಗ ಪಂಥಾಹ್ವಾನ ನೀಡಲು ಬಂದಿಲ್ಲ ಅತ್ತೆ. ಯುದ್ಧ ಪ್ರಾರಂಭವಾಗಿ ಮುಕ್ತಾಯಗೊಳ್ಳುವವರೆಗೂ ನಿಮ್ಮ ಎರಡು ತಪ್ಪುಗಳಿಂದ ಈ ದ್ರೌಪದಿ ಪಟ್ಟ ಸಂಕಟಗಳು ಏನೇನೆಂದು ನಿಮ್ಮನ್ನು ಕಾಡುತಿರಲಿ. ಆ ತಪ್ಪುಗಳು ಕರ್ಣನ ಜನ್ಮದ ರಹಸ್ಯ ಬಚ್ಚಿಟ್ಟದ್ದೋ, ಅಥವಾ ನನ್ನ ಸ್ವಯಂವರದ ಕ್ರಮ ತಪ್ಪಿಸಿದ್ದೋ, ಯೋಚಿಸಿರಿ. ಮುಂದೆ ಭೇಟಿಯಾದಾಗ ಹೇಳುವಿರಂತೆ. ನಾನಿನ್ನು ಬರುವೆ ಅಪ್ಪಣೆಯಾಗಲಿ...’

ಕಾಲಿಗೆ ನಮಸ್ಕರಿಸುವಂತೆ ಮಾಡಿ, ಬಿರುಗಾಳಿಯಂತೆ ಹೋದ ದ್ರೌಪದಿಯ ದಿಕ್ಕಿನತ್ತ ಕುಂತಿಯ ದೃಷ್ಟಿ ನೆಟ್ಟಿತು.

ಪ್ರತಿಕ್ರಿಯಿಸಿ: feedback@sudha.co.in